೧೬

ಚಾಮುಂಡರಾಯ ತನ್ನ ತಾಯಿಯ ಭಗವದ್ ಮಹಾತ್ವಾಕಾಂಕ್ಷೆಯನ್ನು ಈಡೇರಿಸಲು ಶ್ರವಣಬೆಲಗೊಳದ ಇಂದ್ರಗಿರಿ ಶಿಖರವನ್ನು ಕಡೆಸಿ ಬಾಹುಬಲಿಯ ಬೃಹನ್ ಮೂರ್ತಿಯನ್ನು ಮಾಡಿಸಿದನು. ಈ ಸುದ್ದಿ ಬೀಸುವ ಗಾಳಿಯಲ್ಲೂ ಸೇರಿಕೊಂಡು ಆಸೇತು ಹಿಮಾಚಲದ ತನಕ ಪ್ರಸರಿಸಿತು. ಅಭಿನವಸಮವಸರಣವಾದ ಬೆಳ್ಗುಳವನ್ನು ನೋಡಲು ಶ್ರಾವಕರು ಇರುವೆ ಸಾಲಿಟ್ಟಂತೆ ಹೊರಟರು. ಈ ಸುದ್ದಿಯನ್ನು ರನ್ನಕವಿ ವಿಜಯಪುರಕ್ಕೂ ಮುಟ್ಟಿಸಿದನು. ಚಾಮುಂಡರಾಯನ ಅಪ್ಪಣೆಮೇರೆ ರನ್ನಕವಿ ಅತ್ತಿಮಬ್ಬೆಯನ್ನೂ ಆಕೆಯ ಬಂಧುಬಳಗವನ್ನೂ ಭಗವದ್ ದರ್ಶನಕ್ಕೆ ಆಹ್ವಾನಿಸಿದನು. ಅತ್ತ ಗಂಗರ ರಾಚಮಲ್ಲ. ತೈಲಪನನ್ನೂ ದಲ್ಲಪನನ್ನೂ ಮಲ್ಲಪನನ್ನೂ ಪ್ರತ್ಯೇಕವಾಗಿ ಆಹ್ವಾನಿಸಿದ್ದನು. ಅತ್ತಿಮಬ್ಬೆ ಸಡಗರಗೊಂಡು ಹೊರಟು ನಿಂತಳು. ಲಕ್ಕುಂಡಿ ರಾಜಮಾತೆಯನ್ನು ಆಕೆಯ ಘನತೆಗನುಣವಾಗಿ ಕರೆದುಕೊಂಡು ಹೋಗಲು ರನ್ನ ಸಿದ್ಧನಾಗೇ ಬಂದಿದ್ದನು.

ಅತ್ತಿಮಬ್ಬೆ ಭಗವದ್ ದರ್ಶನಮಾಡುವತನಕ ಹಣ್ಣು ಹಾಲಿನಲ್ಲೇ ಇರುವುದಾಗಿ ವ್ರತತೊಟ್ಟಳು. ಈಕೆಯ ಬಂಧುಬಳಗವೆಲ್ಲ ಇದನ್ನು ನೋಡಿ ಹೆದರಿದರು. "ವಿಜಯ ಪುರವೆಲ್ಲಿ ಶ್ರವಣಬೆಳಗುಳವೆಲ್ಲಿ ? ಏನಿಲ್ಲವೆಂದರೂ ಅವಸರಪಟ್ಟರೆ ಎರಡುವಾರ ಬೇಕಾಗುವುದು ಹೋಗಿ ತಲುಪಲು. ದಾರಿಯುದ್ದಕ್ಕೂ ಜಿನಾಲಯಗಳನ್ನು ನೋಡಿ ಕೊಂಡು ಹೋಗುವುದಾದರೆ ಒಂದು ತಿಂಗಳಾದರೂ ಬೇಕು. ಅಷ್ಟು ದಿನವೂ ಅನ್ನ ನೀರು ಬಿಟ್ಟು ಇರಲಾದೀತೆ ?ವ್ರತಮಾಡುವಾಗಲೂ ಶಕ್ತ್ಯನುಸಾರ ವ್ರತಮಾಡಬೇಕು. ವೃಥಾ ದೇಹವನ್ನು ಸವೆಸಬಾರದು" ಎಂದು ಪದ್ಮಬ್ಬೆ ಸೊಸೆಗೆ ಬುದ್ಧಿ ಹೇಳಿದಳು.

"ಅತ್ತೆ, ಸಂಕಲ್ಪ ಮಾಡಿದ್ದಾಯಿತು. ಉನ್ನತ ಕುಕ್ಕುಟೇಶ್ವರ (ಬಾಹುಬಲಿ) ಪ್ರೇರಣೆ ಕೊಟ್ಟಿರುವನು. ಬಂದುದನ್ನೆಲ್ಲ ಅನಿಭವಿಸುವೆನು" ಎಂದು ಅತ್ತಿಮಬ್ಬೆ ಪಟ್ಟು ಹಿಡಿದಳು.

“ಅತ್ತಿ, ಈಚೆಗೆ ನೀನು ಚಂಡಿ ಹಿಡಿಯುತ್ತಿರುವೆ. ಹಿರಿಯರು ಬೇಡವೆಂದ ವ್ರತವನ್ನು ನೀನು ಮಾಡಲೂ ಬಾರದು ಹಾಲುಹಣ್ಣು ಬಿಟ್ಟು ಕೇವಲ ರೊಟ್ಟಿ ನೀರು ಎರಡರ ವ್ರತವನ್ನಾದರೂ ತೆಗೆದುಕೋ ತಾಯಿ” ಎಂದು ಅಬ್ಬಕಬ್ಬೆ ಹಿತವಚನ ಹೇಳಿದಳು.

“ಅಮ್ಮಾಜಿ, ನೀನು ಊಟಮಾಡದಿದ್ದರೆ ನಾನೂ ಊಟಮಾಡುವುದಿಲ್ಲ” ಎಂದು ಅಣ್ಣಿಗೆ ಅತ್ತು ಕರೆದು ಹೇಳಿಕೊಂಡನು.

“ಅಣ್ಣಾಜಿ, ನನಗೆ ದೇವರು ಹೇಳಿರುವನಪ್ಪ. ಅವನ ಅಪ್ಪಣೆಯಂತೆ ನೋಂಪಿ ಮಾಡಿರುವೆನು. ನನ್ನ ಆಚರಣೆಗೆ ಯಾರೂ ಅಡ್ಡಿಮಾಡಬಾರದು” ಎಂದು ಅತ್ತಿಮಬ್ಬೆ ಮಗನನ್ನು ಸಮಾಧಾನ ಮಾಡಿದಳು. ಇನ್ನು ಹೇಳಿ ಪ್ರಯೋಜನವಿಲ್ಲವೆಂದು ಎಲ್ಲರೂ ಸುಮ್ಮನಾದರು. ಪಂಪ ಕವಿಯನ್ನೂ ಪೊನ್ನ ಕವಿಯನ್ನೂ ಅತ್ತಿಮಬ್ಬೆ ಕರೆಸಿಕೊಂಡಳು. ತಮ್ಮ ಹಿಂದೆ ಹೊರಟು ಬರುವವರಿಗೆಲ್ಲ ದಾರಿ ಖರ್ಚನ್ನು ತಾನೇ ಕೊಡುವುದಾಗಿ ಈಕೆ ಸಾರಿದಳು. ಜಿನಾಲಯಗಳಲ್ಲಿ ಬರೆಸಿ ಶ್ರವಣಬೆಳಗುಳದ ಯಾತ್ರೆಯ ವಿಷಯವನ್ನು ಪ್ರಕಟಪಡಿಸಿದಳು.

ಅತ್ತಿಮಬ್ಬೆಯ ಹಿಂದೆ ನರಕಕ್ಕೆ ಹೋಗುವುದಕ್ಕೂ ಜನ ಸಿದ್ಧವಾಗಿತ್ತು. ಬಡಬಗ್ಗರಿ ಗೆಲ್ಲ ಅತ್ತಿಮಬ್ಬೆಯನ್ನು ಕಂಡರೆ ಬೆಲ್ಲವನ್ನು ಕಂಡಷ್ಟು ಸಂತೋಷ. ಆಕೆಯಿದುರು ಕಂಬನಿ ಮಿಡಿದವರೆಲ್ಲ ಶ್ರೀಮಂತರಾದರು. ಕಷ್ಟವನ್ನು ಹೇಳಿಕೊಂಡವರೆಲ್ಲ ಬದುಕಿ ಹೋದರು. ರೋಗಿಗಳನ್ನು ಕಂಡರಂತೂ ತಾನೇ ಶುಶ್ರೂಷೆ ಮಾಡಿ ಪಥ್ಯಕ್ಕೆ ಕೊಟ್ಟು ಔಷಧಿ ಕೊಡಿಸಿ ರೋಗ ವಾಸಿಯಾದ ಮೇಲೆ ತಿಂಗಳಾನುಗಟ್ಟಲೆ ಹಾಲು ತುಪ್ಪ ಹಣ್ಣು ಕೊಟ್ಟು ಉಪಚರಿಸುತ್ತಿದ್ದಳು. ದೀನದಲಿತರ ಜಾತಿ ಕುಲ ಒಂದನ್ನೂ ವಿಚಾರಿಸದೆ ಸಂದರ್ಭೋಚಿತವಾಗಿ ನೆರವಾಗುತ್ತಿದ್ದಳು. ಇಂಥ ಅನ್ನಪೂರ್ಣೆ ಮನಸಾರೆ ಯಾತ್ರೆಗೆ ಕರೆದಾಗ ಯಾರು ತಾನೆ ನಿಂತಾರು ? ಕೆಲವರು ಯಾತ್ರಿಕರಾಗಿ ಜೊತೆಗೂಡಿದರು. ಕೆಲವರು ಪರಿಚಾರಕರಾಗಿ ಬಂದು ಸೇರಿಕೊಂಡರು ! ಕಲ್ಪವೃಕ್ಷದಡಿ ಕುಳಿತಾಗ ಆಳಾದರೇನು ಅರಸಾದರೇನು ? ಅಮೃತ ಹಂಚುವಾಗ ಕೈಯೊಡ್ಡಿದವರೆಲ್ಲ ಅಮರ ರಾಗುವಂತೆ ಅತ್ತಿಮಬ್ಬೆಯ ಆಶ್ರಯಕ್ಕೆ ಬಂದವರೆಲ್ಲ ಭಗವದ್ ಭಕ್ತರಾಗಿ ಬದುಕಿ ಹೋದರು !

ಅತ್ತಿಮಬ್ಬೆಯ ಯಾತ್ರಾಸಂಘ ದಿನಕ್ಕೆ ಹತ್ತುಮೈಲಿಯಂತೆ ಪ್ರಾಯಾಣ ಮಾಡುತ್ತಿತ್ತು. ನೂರಾರು ಎತ್ತಿನ ಬಂಡಿಗಳು ಸಾಲುಗಟ್ಟಿ ಹೊರಟಿದ್ದವು. ಮುದುಕರನ್ನೂ, ಮಕ್ಕಳನ್ನೂ, ರೋಗಿಗಳನ್ನೂ ಬಂಡಿಯಲ್ಲಿ ಕೂರಿಸಿ, ಕುಡಿದ ನೀರು ಅಲುಗದಂತೆ ಕರೆದೊಯ್ದರು. ಅತ್ತಿಮಬ್ಬೆ ,ಪದ್ಮಬ್ಬೆ, ಅಬ್ಬಕಬ್ಬೆ ಹಾಗು ಅಣ್ಣಿಗ ಒಂದು ರಥದಲ್ಲಿ ಪ್ರಾಯಾಣಮಾಡಿದರು. ಉಳಿದ ಬಂಧುವರ್ಗಕ್ಕೂ ಅವರವರ ಯೋಗ್ಯತೆಗನುಗುಣವಾಗಿ ರಥಗಳಿದ್ದವು. ಅತ್ತಿಮಬ್ಬೆ ಕೇವಲ ಹಾಲು ಹಣ್ಣು ಇಷ್ಟನೇ ಆಹಾರವಾಗಿ ಸ್ವೀಕರಿಸಿದರೂ ಆಕೆಯ ಉತ್ಸಾಹಕ್ಕೆ ಎಂದೂ ಭಂಗಬರಲಿಲ್ಲ. ಯಾತ್ರಿಕರ ಕಷ್ಟಮುಖ ವಿಚಾರಿಸಿ ಎಲ್ಲರನ್ನೂ ತನ್ನ ಮಕ್ಕಳು–ಮರಿಯಂತೆ ನೋಡಿಕೊಂಡು ಅತ್ತಿಮಬ್ಬೆ ಅವರನ್ನೆಲ್ಲ ತೂಗುಯ್ಯಾಲೆಯಲ್ಲಿ ಆಡಿಸುವಂತೆ ಯಾತ್ರೆ ಮಾಡಿಸಿದಳು ! ಅಲ್ಲಲ್ಲೇ ಸಿಗುವ ಜಿನಾಲಯಗಳಲ್ಲಿ ತಂಗಿ ವಿಶ್ರಮಿಸಿಕೊಳ್ಳುತ್ತಿದ್ದರು. ತಂಗಿದೆಡೆಯಲ್ಲೆಲ್ಲ ಆ ಊರಿನ ಜನ ಮರೆಯದಂತೆ ಅತ್ತಿಮಬ್ಬೆ ದಾನಧರ್ಮಮಾಡಿ ಮರುಪ್ರಾಯಾಣ ಮಾಡುತ್ತಿದ್ದಳು.

ಎರಡುವಾರ ಕಳೆಯಿತು. ಅತ್ತಿಮಬ್ಬೆಯ ದೇಹದಲ್ಲಿ ನಿತ್ರಾಣ ಕಾಣಿಸಿಕೊಂಡಿತು. ಹಾಲು ಹಣ್ಣಿನಲ್ಲೂ ಕ್ರಮಬಿಟ್ಟು ಈಕೆ ಎಂದೂ ತೆಗೆದುಕೊಳ್ಳುತ್ತಿರಲಿಲ್ಲ.ಹೊತ್ತು ಬಿದ್ದ ಮೇಲೆ ಏನನ್ನೂ ತಿನ್ನುತ್ತಿರಲಿಲ್ಲ. ದಿನಕ್ಕೆ ಎರಡು ಬಾರಿ ಮಾತ್ರ ಹಾಲು ಹಣ್ಣು ಮಿತವಾಗಿ ಸೇವಿಸುತ್ತಿದ್ದಳು. ಈಕೆಯ ಕೃಶವಾದ ದೇಹವನ್ನು ಕಂಡು ಎಲ್ಲರೂಗಾಬರಿಗೊಂಡರು.

“ಅಮ್ಮಯ್ಯ, ನೀನು ಕನ್ನಡನಾಡಿನ ಕಣ್ಮಣಿ ! ನೀನು ಬದುಕಿದಷ್ಟೂ ನಮ್ಮ ನಾಡು ಬದುಕವುದು ನೀನು ಕೃಶವಾದರೆ ಕನ್ನಡನಾಡು ಕೃಶವಾಗುವುದು. ಕನ್ನಡ ಸಂಸ್ಕೃತಿ ಕೃಶವಾಗುವುದು. ರಾಷ್ಟ್ರೀಯ ವ್ಯಕ್ತಿಯಾದ ನಿನ್ನ ಆರೋಗ್ಯ ಅತಿಮುಖ್ಯವಾದುದು. ಹಾಲುಹಣ್ಣನ್ನಾದರೂ ತುಸು ಹೆಚ್ಚಾಗಿ ಸ್ವೀಕರಿಸಬಾರದೆ ?” ಎಂದು ಪಂಪ ಕವಿ ಗಾಬರಿಗೊಂಡು ಹೇಳಿದನು.

“ಅಮ್ಮಾಜಿ ,ನಿಮ್ಮನ್ನು ಉಪವಾಸ ಸೊರಗಿಸುವುದಕ್ಕೆ ಯಾರಿಗೂ ಇಷ್ಟವಿಲ್ಲ. ವ್ರತ ತುಂಬ ಕಠಿಣವಾಯಿತು. ಸಮವಸರಣಕ್ಕೆ ಹೋಗುವಾಗಲಾದರೂ ಹಾಯಾಗಿರ ಬೇಡವೆ ? ರಾಗದ್ವೇಷವನ್ನು ಬಿಟ್ಟು ನಿರ್ಲಿಪ್ತರಾದ ತಾವು ಆಹಾರವನ್ನು ತ್ಯಜಿಸುವ ಆವಶ್ಯಕತೆಯೇ ಇಲ್ಲ. ಪಂಪಮಹಾಕವಿಗಳು

ಹೇಳಿದಂತೆ ಸ್ವಲ್ಪ ಹೆಚ್ಚಿಗೆ ತಾವು ಸ್ವೀಕರಿಸಬೇಕು. ಮರದ ಬೇರು ಒಣಗಿದರೆ ಮರವೆಲ್ಲ ಒಣಗಿದಂತೆಯೇ !" ಎಂದು ರನ್ನ ಚಿಂತಾಕ್ರಾಂತನಾಗಿ ನುಡಿದನು.

"ಮಾವ, ತಾವು ಹಾಗು ರನ್ನ ಇಬ್ಬರೂ ರಸಜೀವಿಗಳು ! ತಮ್ಮಂಥವರೂ ನನ್ನ ವ್ರತಕ್ಕೆ ಅಂತರಾಯ ಒಡ್ಡುತ್ತಿರುವುದು ಸರಿಯೇ ? ಈ ಮಣ್ಣಿನ ಗೂಡಿಗೆ ತಾವಿಬ್ಬರೂ ವಿಪರೀತ ಬೆಲೆಕಟ್ಟುತ್ತಿವಿರಿ !ನಾನು ಸತ್ತರೆ ಲೋಕ ಮುಳುಗುವುದೆ ? ನನ್ನ ಕೋಳಿಯಿಂದ ಬೆಳಕು, ನನ್ನ ಕೊಳ್ಳಿಯಿಂದ ಅಡುಗೆ ಎಂದು ಜಂಬದ ಮುದುಕಿ ಹೇಳಿದಂತೆ ನನ್ನಿಂದಲೇ ಎಲ್ಲವೂ ಆಗುತ್ತಿರುವುದೆಂದು ತಾವಿಬ್ಬರೂ ಹೇಳುತ್ತಿರುವಿರಿ !" ಎಂದು ಅತ್ತಿಮಬ್ಬೆ ಅವರ ಮಾತಿಗೆ ಅಲಕ್ಷ್ಯಮಾಡುವಳು.

"ಪೊನ್ನ ಸ್ವಾಮೀಜಿ ,ತಾವಾದರೂ ಅತ್ತಿಮಬ್ಬೆ ಒಂದು ಮಾತು ಹೇಳಬಾರದೆ ? ಅಹಿಂಸಾವೃಕ್ಷ ಒಣಗುವುದನ್ನು ಯಾರು ತಾನೆ ನೋಡಲು ಸಾಧ್ಯ ! ಮೂರ್ತಿವೆತ್ತ ಕನ್ನಡಾಂಬೆ ಹೊಟ್ಟೆಗಿಲ್ಲದೆ ನವೆಯಬೇಕೆ ?" ಎಂದು ಪಂಪ, ಪೊನ್ನನನ್ನು ಮರೆ ಹೊಕ್ಕನು.

"ಪಂಪ, ನಾವು ವಿರಕ್ತರು. ಯಾರ ಭಾವದಲ್ಲಿ ಯಾವ ಶಕ್ತಿಯೋ ಕಂಡವರಾರು ?" ಎಂದು ಪೊನ್ನಕವಿ ನುಡಿದನು.

"ಸ್ವಾಮಿ, ಸಂಸಾರಕ್ಕಾಗಿ ಎಷ್ಟು ಭವ ಎತ್ತಿರಬಗುದು ?ವಿಶಯ ಸುಖಕ್ಕಾಗಿ ನಾನು ಅನಂತಕಾಲದಿಂದ ಅನಂತ ಭವ ಎತ್ತಿ ಅಂಡಲೆದೆನು. ರಾಗದ್ವೇಷಕ್ಕಾಗಿ ಅಗಣಿತ ಭವಗಳೆತ್ತಿ ತೊಳಲಾಡಿರುವೆನು. ದೇವರಿಗಾಗಿ ಒಂದು ಭವ ಮೀಸಲಾಗಲೆಂದು ಆಶಿಸಿದರೆ ಎಷ್ಟೊಂದು ವಿಘ್ನಗಳಪ್ಪ !" ಎಂದು ಅತ್ತಿಮಬ್ಬೆ ಬೇಸರಗೊಂಡು ನುಡಿದಳು.

'ಅಬ್ಬೆ, ನೀನು ಕಂಗಡಬೇಡು. ಎಂಥ ಪ್ರಸಂಗ ಬಂದರೂ ವ್ರತಭಂಗ ಕೊಳ್ಳಬೇಡ. ಲೋಕದ ಕಣ್ಗೆ ನಾನೂ ನೀನು ಇಬ್ಬರೂ ಹುಚ್ಚರೆ ! ನಮ್ಮಿಬ್ಬರಿಗೂ ಪರಮಾತ್ಮನ ಹುಚ್ಚು !" ಎಂದು ಪೊನ್ನಕವಿ ಆಕೆಯ ಆಚರಣೆಗೆ ಪ್ರೋತ್ಸಾಹ ಕೊಟ್ಟನು.

ಪ್ರಯಾಣ ಹೊರಟ ಒಂದು ತಿಂಗಳಿಗೆ ಯಾತ್ರಿಕರು ಇರಸೇವೆ ಗ್ರಾಮಕ್ಕೆ ಬಂದುತಲಿಪಿದರು. ರಾತ್ರಿ ಅಲ್ಲೇ ತಂಗಿದ್ದರು. ಬೆಳಿಗ್ಗೆ ಸ್ನಾನ ಸಂಧ್ಯಾವಂದನೆ ತೀರಿಸಿ ಕೊಂಡರು ಲಘು ಉಪಹಾರವನ್ನು

ಸ್ವೀಕರಿಸಿದರು. ಅತ್ತಿಮಬ್ಬೆ ಎಂದಿನಂತೆ ತೀರಿಸಿ ಕೊಂಡರು ಲಘು ಉಪಹಾರವನ್ನು ಸ್ವೀಕರಿಸಿದರು. ಅತ್ತಿಮಬ್ಬೆ ಎಂದಿನಂತೆ ಮಿತವಾಗೇ ಹಾಲುಹಣ್ಣು ಸ್ವೀಕರಿಸಿದಳು. ಸಿದ್ಧಿ ಹತ್ತಿರವಾದ ಯೋಗಿಯಂತೆ ಉತ್ಸಾಹ ದಿಂದ ಹೊರಟಳು. ಪ್ರತಿಕ್ಷಣದಲ್ಲೂ ದೇವರು ಕಾಣುವುದೇನೋ ಎಂದು ದಿಟ್ಟಿಯನ್ನು ಶ್ರವಣಬೆಳಗೊಳದ ಕಡೆ ಹರಿಸುವಳು. ಅರೆಚಣ ಸಾಗಿದಮೇಲೆ ಆಕೆಗೆ ಪರಮಾತ್ಮನ ದರ್ಶನವಾಯಿತು ! ಹಸುಗೂಸಿನಂತೆ ಬಾಹುಬಲಿ ಮೂರ್ತಿ ದೂರದಿಂದಲೇ ಈ ಯಾತ್ರಿಕರನ್ನು ಕಂಡು ಮುಗುಳ್ನಕ್ಕನು. ಮಂದಹಾಸವನ್ನು ಬೀರಿ ಸ್ವಾಗತಿಸುತ್ತಿರುವಂತೆ ಯಾತ್ರಿಕರಿಗೆ ಭಾಸವಾಯಿತು. ಸಹಸ್ರಾರು ಜನ ಇದ್ದ ಆ ಗುಂಪು ಆಕಾಶ ಬಿರಿಯುವಂತೆ ಜಯಘೋಷ ಮಾಡಿತು ! ಕ್ಷಣಕ್ಷಣಕ್ಕೂ ಬಾಹುಬಲಿ ಅವರಿಗೆ ಸ್ಪಷ್ಟವಾಗುತ್ತ ಗೋಚರಿಸಿದನು.

ದಾರಿಯ ಇಕ್ಕೆಲದಲ್ಲೂ ಬತ್ತದ ಗದ್ದೆಗಳು. ಲಸಿರು ರತ್ನಗಂಬಳಿ ಹಾಸಿದಂಥ ಮೋಹಕ ದೃಶ್ಯ ! ಅಲ್ಲಲ್ಲೇ ಗುಂಪಾಗಿ ಹಾರಾಡುವ ಬೆಳ್ವಕ್ಕಿಗಳು ! ಉದ್ದಕ್ಕೂ ಒಂದಾದಮೇಲೊಂದರಂತೆ ಜಲಾಶಯಗಳು. ಜಲಾಶಯದ ಉದ್ದಗಲದಲ್ಲೂ ಬಿರಿದ ತಾವರೆ ! ಪರಮ್ಮಾತನ ಸಾನ್ನಿಧ್ಯ ಹತ್ತಿರವಾಗುತ್ತಿರುವುದನ್ನು ಈ ರಸದೃಶ್ಯಗಳು ನೆನಪುಮಾಡುವಂತಿತ್ತು. ಬ್ರಹ್ಮಾನಂದಕ್ಕೆ ರಸಾನಂದದ ಆವರಣ ಕಟ್ಟಿದಂತೆ ಶ್ರವಣ ಬೆಳುಗುಳಕ್ಕೂ ಇರಸೇವೆ ಗ್ರಾಮಕ್ಕೂ ನಡುವಣ ಪ್ರಕೃತಿ ಸೌಂದರ್ಯ ಎಲ್ಲರನ್ನೂ ಮರುಳುಗೊಳಿಸಿತು. ಪಂಪಕವಿ ಮರಿದುಂಬಿಯಾಗಿ ತಾವರೆಯ ಸುತ್ತ ಮಾನಸಿಕವಾಗಿ ಹಾರಾಡಿದನು. ಬೆಳ್ವಕ್ಕಿಗಳನ್ನು ನೋಡುತ್ತ ತಾನೂ ಬೆಳ್ವಕ್ಕಿಯಾಗಿ ಹಾರಿ ಇಂದ್ರ ಗಿರಿಯನ್ನು ಕಂಡಂತೆ ರೋಮಾಂಚನಗೊಂಡನು ! ಅತ್ತಿಮಬ್ಬೆಗೆ ಭಗವದ್ ಭಕ್ತಿ ಎಲ್ಲೆಲ್ಲೂ ನಾನಾರೂಪ ತಾಲಿ ವಿರಾಜಿಸುತ್ತಿರುವಂತೆ ಅನಿಭವಕ್ಕೆ ಬಂದಿತು. ದೇಹಕೃಶವಾಗಿದ್ದರೂ ಆಕೆಯ ಅಂತರಂಗ ಗೆಲುವಿನಿಂದ ತುಂಬಿ ತುಳುಕಾಡಿತು !

ರನ್ನ ಕವಿ ಮಂಚಿತವಾಗೇ ಹೋಗಿ ಚಾಮುಂಡರಾಯನಿಗೆ ಸುದ್ದಿ ಮುಟ್ಟಿಸಿದನು. ಚಾಮುಂಡರಾಯ ತನ್ನ ಪರಿವಾರವನ್ನೆಲ್ಲ ಕಟ್ಟಿಕೊಂಡು ಈ ಯಾತ್ರಿಕರನ್ನು ಇದಿರುಗೊಳ್ಳಲು ಶ್ರವಣಬೆಳುಗುಳದ ಊರು ಮುಂದೆ ಕಾದಿದ್ದನು. ಪಂಪ ಕವಿಯನ್ನೂ, ದಲ್ಲಪನನ್ನೂ, ಮಲ್ಲಪನನ್ನೂ ಗೌರವದಿಂದ ಸ್ವಾಗತಿಸಿದನು. ಪೊನ್ನಕವಿಗೆ ಸಾಷ್ಟಾಂಗವೆರಗಿ ಪಾಧಧೂಳಿಯನ್ನು

ಕಣ್ಣಿಗೊತ್ತಿಕೊಂಡನು. ಅತ್ತ ಕಾಳಲಾದೇವಿ ಮಹಿಳೆಯರನ್ನೆಲ್ಲ ನಗುಮುಖದಿಂದ ಸ್ವಾಗತಿಸಿದಳು. ಕೃಶವಾದ ಅತ್ತಿಮಬ್ಬೆಯನ್ನು ಕಂಡು ಚಕಿತಳಾದಳು. "ಅತ್ತಿ ,ಏಕೆ ಮಗು ಹೀಗಾಗಿರುವೆ ?ಏನಾದರೂ ಆರೋಗ್ಯ ಚೆನ್ನಾಗಿರಲಿಲ್ಲವೆ ? ನನ್ನಪ್ಪನನ್ನು ಒಮ್ಮೆ ನೋಡಿಬಿಡು ಅಮೃತ ಉಂಡಂತೆ ಊದಿಕೊಳ್ಳುವೆ !" ಎಂದು ಆಕೆಯ ಮೈದಡವಿ ಕರುಣೆತೋರಿದಳು. ಅತ್ತಿಮಬ್ಬೆ ಕಾಳಲಾದೇವಿಯ ಕಾಲಿಗೆ ಬಿದ್ದು 'ಅತ್ತೆ, ಸಮವಸರಣವನ್ನು ಕರೆದು ತಂದಿರುವಿರಿ !ನಿಮಗೆ ನಮ್ಮ ನಾಡೆಲ್ಲ ಚಿರಋಣಿಯಾಗಿರಬೇಕು. ನಮ್ಮಂಥವರು ಸಾವಿರ ಜನವಿರುವುದೂ ಒಂದೆ ನಿನ್ನಂಥವಳು ಬಬ್ಬಳಿರುವುದೂ ಒಂದೆ" ಎಂದು ಅತ್ತಿಮಬ್ಬೆ ಆಕೆಯನ್ನು ಕೊಂಡಾಡಿದಳು.

"ಅತ್ತಿ, ನೀನೆಲ್ಲಿ ನಾನೆಲ್ಲಿ ? ಕನ್ನಡನಾಡೆಲ್ಲ ನೀನೇ ಆಗಿ ಜಂಗಮ ಕಲ್ಪಲತೆಯಾಗಿ ರಾರಾಜಿಸುತ್ತಿರುವೆ ! ನಿನ್ನ ಮಹತ್ಕಾರ್ಯಗಳನ್ನೆಲ್ಲ ನಾನೂ ಕೇಳಿರುವೆನು. ಧವಳ ಜೈಧವಳಗಳ ನೂರು ಪ್ರತಿಮಾಡಿಸಿದ ಪುಣ್ಯಾತ್ಮಗಿತ್ತಿ ನೀನು ! ಸಾವಿರದೈನೂರು ಬಂಗಾರದ ಬಿಂಬಗಳನ್ನು ಮಾಡಿಸಿ ದಾನಕೊಟ್ಟ ಭವ್ಯಾತ್ಮಳು. ನೀನು ಕೊಟ್ಟ ಬಂಗಾರವನ್ನೆಲ್ಲ ರಾಶಿ ಹಾಕಿದ್ದರೆ ಇಂಥ ಮೂರ್ತಿಯನ್ನೇ ಮಡಬಹುದಗಿತ್ತಲ್ಲ ! ಎಂದು ಕಾಳಾದೇವಿ ಅತ್ತಿಮಬ್ಬೆಯನ್ನು ಕೊಂಡಾಡಿದಳು.

"ಅಮ್ಮಾಜಿ, ತಾವು ಒಂದು ಮಹಾ ಪರ್ವತ! ಅತ್ತಿಮಬ್ಬೆ ಕರುಣಾತರಂಗಗಳಿಂದ ಸಿಂಗರಗೊಂಡ ಒಂದು ಮಹಾಸಾಗರ !" ಎಂದು ಪಂಪ ಕವಿ ಮಹಿಳಾರತ್ನಗಳಿಬ್ಬರನ್ನೂ ಕಾವ್ಯದ ಭಾಷೆಯಲ್ಲೇ ಕೊಂಡಾಡಿದನು.

"ನಮ್ಮಿಬ್ಬರಲ್ಲಿ ಬಬ್ಬರು ಪರ್ವತ, ಇನ್ನೊಬ್ಬರು ಮಹಾಸಾಗರವಾದರೆ ತಾವು ಆಕಾಶವೇನೋ !" ಎಂದು ಕಾಳಲಾದೇವಿ ಮುಗುಳ್ನಕ್ಕಳು.

"ಅರೆ! ಅರೆ ! ವಿಸ್ತಾರವದುದನ್ನೂ ಎತ್ತರವಾದುದನ್ನೂ, ಆಳವಾದುದನ್ನೂ ತಾವು ಮೂವರೇ ಅಕ್ರಮಿಸಿಕೊಂಡುಬಿಟ್ಟರೆ ನನ್ನಗತಿ ?" ಎಂದು ರನ್ನ ಗಂಟು ಕಳೆದು ಕೊಂಡಾವನಂತೆ ಆಡಿದನು.

"ಹೆದರಬೇಡ ರನ್ನ, ನೀನು ಕವಿ ಮಾರ್ತಂಡನಯ್ಯ !" ಎಂದು ಪಂಪ ಕವಿ ಅವನ ಬೆನ್ನ ಚಪ್ಪರಿಸಿದನು.

“ಸದ್ಯ ಬದುಕಿದೆ. ಆಗಸದ ತುಂಬ ಒಡಾಡಬಹುದು. ನನ್ನ ಕಿರಣರಾಜಿಯಿಂದ ಸಾಗರದ ನೀರನ್ನು ಬೇಕಾದಾಗೆಲ್ಲ ಬಾಚಬಹುದು !” ಎಂದು ರನ್ನ ಕವಿ ನಗೆಯಾಡಿದನು.

ಎಲ್ಲರೂ ಗೊಮ್ಮಟ ದರ್ಶನಕ್ಕೆ ಹೊರಟು ನಿಂತರು. ನಿತ್ರಾಣಗೊಂಡಿದ್ದ ಅತ್ತಿಮಬೆಯನ್ನು ತೊಟ್ಟಿಲಲ್ಲಿ ಕಳಿಸಿಕೊಡುವುದಾಗಿ ಕಾಳಲಾದೇವಿ ತಿಳಿಸಿದಳು.

“ಅತ್ತೆ ,ನನ್ನ ಮೇಲೆ ತಮಗೆ ತುಬ ಮರುಕ !ತೊಟ್ಟಿಲಲ್ಲಿ ಹೋಗಲು ನನೇನು ಮಗುವೇ ?” ಅತ್ತಿಮಬ್ಬೆ ಒಡಂಬಡಲಿಲ್ಲ .

“ಮಗು ,ನಿನ್ನ ದೇಹ ಕೃಶವಾಗಿದೆಯಮ್ಮ. ಈಗ ಹಟಮಡಬಾರದು. ನನ್ನಪ್ಪನ ದರ್ಶನಮಾಡುವುದು ಮುಖ್ಯವೇ ಹೊರತು ಹೇಗೆ ಹೋದರೇನು. ಹಸುಗೂಸುಗಳನ್ನೂ, ಮುದುಕರನ್ನೂ, ರೋಗಿಗಳನ್ನೂ ಹತ್ತಿಯೆ ತನ್ನಲ್ಲಿಗೆ ಬರಬೇಕೆಂದು ಗೊಮ್ಮಟ ಸ್ವಾಮಿ ನಿರ್ಬಂಧಪಡಿಸಿಲ್ಲವಲ್ಲ. ನಮಗೆ ಸರಿಕಂಡಂತೆ ಅಲ್ಲಿಗೆ ಹೋದರಾಯಿತು. ಹೋದವನ್ನೆಲ್ಲ ಮದಹಾಸಬೀರಿ ನನ್ನ ಸ್ವಾಮಿ ಮುಗ್ಧಗೊಳಿಸಿಬಿಡುವನು ! ನಾವು ಮಲಗಿ ಅವನನ್ನು ಕೊಂಡಡಿದರೆ ಗೊಮ್ಮಟಸ್ವಾಮಿ ಕುಳಿತು ಕೇಳುವನು. ನಾವು ಕೂಳಿತು ಕೊಂಡಾಡಿದಾಗ ಅವನು ನಿಂತು ಆಲಿಸುವನು. ನಾವು ನಿಂತು ಹಾಡಿದಾಗ ಅವನು ನಲಿದು ಕಿವಿಗೊಡನು ! ನಾವೂ ನಲಿದು ಹಾಡಿದರೆ ಅವನು ತ್ನನ ಸಾಮ್ರಾಜ್ಯವನ್ನೆಲ್ಲ ನಮಗೆ ಕೊಟ್ಟುಬಿಡುವನು !ಅತ್ತಿ ,ನೀನು ನನ್ನ ಮನೆಗೆ ಮಂದಿರುವೆ. ಇಲ್ಲಾದರೂ ನಮ್ಮ ಕಟ್ಟುಪಾಡಿಗೆ ಒಪ್ಪಿ ನಡೆಯಬೇಕು. ನೀನು ತೊಟ್ಟಿಲಲ್ಲೇ ಹೋಗಬೇಕು” ಎಂದು ಕಾಳಲಾದೇವಿ ಹಟಹಿಡಿದಳು.

“ಅತ್ತೆ , ಈ ವಿಚಾರದಲ್ಲಿ ನನ್ನುನ್ನು ಬಂಧಿಸಬೇಡಿ. ನಿಮಿತ್ತಮಾತ್ರಕ್ಕೆನಾನು ಕಾಲುಗಳನ್ನಾಡಿಸಿದರೂ ಗೊಮ್ಮಟಸ್ವಾಮಿ ನನ್ನನ್ನು ಎತ್ತಿಕೊಳ್ಳದಿರನು. ಅಂಥ ನನ್ನಪ್ಪನನ್ನು ಕಾಣಲು ಬಡಜನ ಹೊರುವ ತೊಟ್ಟಿಲಲ್ಲಿ ಕೂರಲೆ ? ಆ ನನ್ನ ಸ್ವಾಮಿಯ ನಾಮಸಂಕೀರ್ತನೆ ಮಾಡುತ್ತ ಹತ್ತಿಹೋಗಲಾರೆನೆ ?” ಎಂದು ಅತ್ತಿಮಬ್ಬೆ ಚಂಡಿ ಹಿಡಿದಳು.

"ಅತ್ತೆ. ನಿನಗೇನು ಬುದ್ಧಿ ಇದೆಯೋ ಇಲ್ಲವೋ ? ಅನ್ನ ನೀರುಬಿಟ್ಟು ತಾರಾಗಿ ಹೋಗಿರುವೆ ! ನೀನು ಹತ್ತುವುದಾದರೆ ಖಂಡಿತ ದೇವರ ತನಕ ಮುಟ್ಟುವ ನಂಬಿಕೆಯಿಲ್ಲ. ಸುಮ್ಮನೆ ತೊಟ್ಟಿಲಲ್ಲಿ ಕುಳಿತುಕೋ" ಎಂದು ಅಬ್ಬಕಬ್ಬೆ ಸಿಡುಕಾದಳು.

"ಅಮ್ಮಾಜಿ, ಕಪ್ಪೆಯ ಕಥೆಯನ್ನು ತಾವು ಮರೆತಂತೆಇದೆ. ಮಹಾವೀರಪ್ರಭುವಿನ ಸಮವಸರಣ ನೋಡುವ ಆಸೆಯಾಗಿ ಒಂದು ಕಪ್ಪೆ ಬಾಯಲ್ಲಿ ಕೋಲೆ ಹೂವನ್ನು ಕಚ್ಚಿಕೊಂಡು ವಿಪುಲಾದ್ರಿಯನ್ನು ಏರಿಹೋಗಲು ಸಂಕಲ್ಪಮಾಡಿತು. ಕುಪ್ಪಲೀಸುತ್ತ ಕುಪ್ಪಳಿಸುತ್ತ ಗುಣಸ್ಥಾನಂದಿಂದ ಗುಣಸ್ಥಾನಕ್ಕೆ ಏರುವ ಮಹಿರ್ಷಿಯಂತೆ ಅದೂ ಅಷ್ಟೋ ಇಷ್ಟೊ ಬೆಟ್ಟ ಹತ್ತಿತ್ತು. ಆ ವೇಳೆಗೆ ಶ್ರೇಣಿಕ ಮಹಾರಾಜರು ಆನೆಯಮೇಲೆ ಕುಳಿತು ವಿಪುಲಾದ್ರಿಗೆ ಹೊರಟರು.ಪಾಪ ,ದೇವರ ದರ್ಶನಾಕಾಂಕ್ಷಿಯಾಗಿ ಹೊರಟ್ಟಿದ್ದ ಕಪ್ಪೆ ಆನೆಯ ಕಾಲಡಿ ಸಿಕ್ಕಿ ನಜ್ಜೀಬಿಜ್ಜಿಯಾಯಿತು ! ಆದರೇನಂತೆ ಅದರ ಅಂತರಂಗದಲ್ಲಿ ಸಮವಸರಣದ ವೈಭವ ಬಂದು ನೆರೆದಿದ್ದುದರಿಂದ ಸಮಾಧಿಮರಣ ಕಪ್ಪೆಗೂ ಲಭಿಸಿ ದೇವತೆಯಾಗಿ ಜನಿಸಿತು . ಮರುಕ್ಷಣದಲ್ಲೇ ವಿಮಾನವೇರಿ ಮಹಾವೀರನ ಸಮವಸರಣಕ್ಕೆ ತಾನೂ ಶ್ರೇಣಿಕನಿಗಿಂತ ಮುಂಚಿತವಾಗೇ ಬಂದಿತಲ್ಲ ! ದಾರಿಯಲ್ಲೇ ನಾನೂ ಸಮವಸರಣಕ್ಕೆ ತಾನೂ ಶ್ರೇಣಿಕನಿಗಿಂತ ಮುಂಚಿತವಾಗೇ ಬಂದಿತಲ್ಲ ! ದಾರಿಯಲ್ಲೇ ನಾನೂ ಸಾಯಬಹುದು. ಅದಕ್ಕಿಂತ ಬೇರೆ ಪುಣ್ಯ ಬೇಕೆ ?" ಎಂದು ಅತ್ತಿಮಬ್ಬೆ ಆವೇಶದಿಂದ ಹೊರಟಳು. ತಡೆದು ಪ್ರಯೋಜನವಿಲ್ಲೆಂದು ಎಲ್ಲ ತೆಪ್ಪಾಗಾದರು.

ಅತ್ತಿಮಬ್ಬೆಯ ಉತ್ಸಾಹಕ್ಕೆ ಇತಿಮಿತಿ ಇಲ್ಲದಿದ್ದರೂ ದೇಹಕ್ಕೂ ಇತಿಮಿತಿ ಇಲ್ಲವೆ ? ಹತ್ತಾರು ಮಾರು ಪ್ರಾಯಸದಿಂದ ಬೆಟ್ಟವನ್ನು ಏರಿದಳಾದರೂ ಅನಂತರ ಏರಲಾರದೆ ಅಲ್ಲೇ ಕುಸಿದಳು ! ಶಾಂತಿ, ಜಕ್ಕಿ ಇಬ್ಬರೂ ಅತ್ತ ಇತ್ತ ನಿಂತು ಹಿಡಿದುಕೊಂಡರು. ಆಮೇಲೆ ಅತ್ತಿಮಬ್ಬೆ ಕುಳಿತು ಮಗುವಿನಂತೆ ಅಂಬೆಗಾಲಿಟ್ಟು ಒಂದೊಂದೇ ಹೆಜ್ಜೆಸವೆಸಿದಳು.

"ಅತ್ತೆ. ನಾವಿಬ್ಬರೂ ನಿನ್ನನ್ನು ಎತ್ತಿಕೊಂಡು ಹೋದೇವು. ನಮಗೂ ಸೇವೆ ಮಾಡಿದ ಪುಣ್ಯ ಲಭಿಸಲಿ. ಹಾಗೇ ಮಾಡೋಣವೇ ?" ಎಂದು ಶಾಂತಿ ವಿನಯದಿಂದ ಬೆಸಗೊಂಡಳು.

“ಶಾಂತಿ, ಅವರವರ ಕರ್ಮವನ್ನು ಅವರೇ ಸವೆಸಬೇಕು ತಾಯಿ .ಇಲ್ಲೇನೋ ನನ್ನನ್ನು ಮೇಲೆತ್ತುವಿರಿ, ಆದರೆ ಭವಸಾಗರದಿಂದ ನನ್ನನ್ನು ಎತ್ತಲು ಯಾರಿಂದ ಸಾಧ್ಯಾವಾದೀತು ?” ಎಂದು ಮಾರ್ಮಿಕವಾಗಿ ಪ್ರಶ್ನಿಸಿದಳು.

“ಅತ್ತೆ, ಎಲ್ಲ ದೃಢಪಡಿಸಿಕೊಳ್ಳಬೇಕು ಮಗು. ಈ ದೇಹಕ್ಕೆ ಎಷ್ಟೆಷ್ಟು ಅನುಕೂಲ ಹೆಚ್ಚುವುದೋ ಅಷ್ಟಷ್ಟೂ ನಾವು ದೇವರಿಂದ ದೂರವಾಗುತ್ತೇವೆ. ಅಷ್ಟಷ್ಟೂ ಧರ್ಮವನ್ನು ಕಂಡರೆ ಬೆಚ್ಚುತ್ತೇವೆ. ಜನ್ಮ ಜನ್ಮದಲ್ಲೂ ಈ ಗೂಡಿಗೆ ಕೇಳಿದ ಸುಖವನ್ನು ಕೊಟ್ಟು ನೋಡಿದ್ದಾಗಿದೆ, ಅಷ್ಟೆಲ್ಲ ಸುಖ ಉಂಡು ಈ ದೇಹ ನಮ್ಮ ಆತ್ಮವನ್ನು ಒಂದು ಹೆಜ್ಜೆಯಾದರೂ ಮುಂದಕ್ಕೆ ತೆಗೆದುಕೊಂಡು ಹೋಗಿದೆಯೆ ?ಶಾಂತಿ, ದೇಹದ ಅಧೀನದಲ್ಲಿ ನಾನಿಲ್ಲ. ನನ್ನ ಅಧೀನದಲ್ಲಿ ದೇಹವನ್ನು ಇರಿಸಿಕೊಂಡಿರುವೆನು. ಕಳ್ಳನ ತಾಯಿ ಕಣಿ ಹೇಳಿದಂತೆ ನೀವೆಲ್ಲ ನನಗೆ ಬುದ್ಧಿ ಹೇಳಲು ಬರುತ್ತಿರುವಿರಿ !” ಎಂದು ಅತ್ತಿಮಬ್ಬೆ ಸಿಡುಕಾದಳು.

ಮಗುವಿನಂತೆ ಕೈ ಕಾಲು ಎರಡನ್ನೂ ಉಪಯೋಗಿಸಿಕೊಂಡು ಅತ್ತಿಮಬ್ಬೆ ಬೆಟ್ಟವನ್ನೆಲ್ಲ ಹತ್ತಿದಳು. ಬಾಹುಬಲಿಯ ಬೃಹನ್ ಮೂರ್ತಿಯ ಮೊದಲನೆಯ ಪ್ರಾಕಾರವನ್ನು ಪ್ರವೇಶಿಸಿದಳು. ಬಾಹುಬಲಿಯ ಮೇಲ್ ಭಾಗ ಸ್ಪಷ್ಟವಾಗಿ ದರ್ಶನವಾಯಿತು. ಎಳೆ ಮೋಡ ತೆಳ್ಳನೆಯ ತೆರೆಯಂತೆ ಬಾಹುಬಲಿಯ ಮುಖಕ್ಕೆ ಇಳಿದು ಚೆಲ್ಲಾಟ ವಾಡುವ ದೃಶ್ಯವನ್ನು ಕಂಡುಅತ್ತಿಮಬ್ಬೆಯ ಆಯಾಸವೆಲ್ಲ ಪರಿಹಾರಯಿತು !ನವಚೈತನ್ಯ ಮೂಡಿದಂತಾಯಿತು. ಉತ್ಸಾಹದ ಭರತವೇರಿ ಅತ್ತಿಮಬ್ಬೆ ಎಲ್ಲರಂತೆ ನಡೆದು ಒಳಪ್ರಾಕಾರಕ್ಕೆ ಬಂದಳು. ನೇರವಾಗಿ ಬಾಹುಬಲಿಯ ಪಾದಾರವಿಂದಕ್ಕೆ ಬಂದು ಎರಡು ಕೈಯಲ್ಲೂ ಪಾದಗಳನ್ನು ಹಿಡಿದುಕೊಂಡು ತನ್ನ ಕೃಶವಾದ ದೇಹವನ್ನು ಕೊಡವಿ ಬಿಡುವಂತೆ ಅಡ್ಡಬಿದ್ದಳು ! ಪರವಶಳಾಗಿ ಹಿಗ್ಗಿದಳು. ತಂಗಾಳಿ ಬೀಸಿತು. ಅಂಗೈ ಅಗಲ ಮೋಡ ತೇಲಿತು. ಬಿಸಲ ಮಳೆ ಹನಿಯಿತು ! ಅತ್ತಿಮಬೆ ಮೇಲೆದ್ದು, ಬರುವ ಯಾತ್ರಿಕರಿಗೆ ಜಾಗಬಿಟ್ಟುಕೊಟ್ಟು ಬಾಹುಬಲಿ ಇಡಿಯಾಗಿ ಕಾಣುವ ಜಾಗದಲ್ಲಿ ಕುಳಿತುಕೊಂಡು ಅನಿಮಿಷನೇತ್ರೆಯಾಗಿ ತನ್ನ ಬೊಗಸೆಗಂಗಳನ್ನು ಎಷ್ಟು ಸಾಧ್ಯವೋ ಅಷ್ಟೂ ಹಿಗ್ಗಿಸಿದಳು.ತನ್ನ ಹೃದಯವನ್ನು ಮಹಾಮೂರ್ತಿಯ ಆಕಾರಕ್ಕನುಗುಣವಾಗಿ ವಿಸ್ತಾರ ಮಾಡಿಕೊಂಡಳು !

ಮಹಾಮೂರ್ತಿ ಬೃಹದಾಕಾರವನ್ನು ತಾಳಿ ಕಾಯೋತ್ಸರ್ಗದಲ್ಲಿ ವಿರಾಜಮಾನನಾಗಿರುವನು. ವಿಶಯಲಂಪಟತನವನೆಲ್ಲ ತೊತ್ತಳತುಳಿದು ಬ್ರಹ್ಮಾನಂದಕ್ಕೆ ಬೆಳೆದುನಿಂತಂತೆ ಬಾಹುಬಲಿ ಪರ್ವತದ ಎದೆಯನ್ನು ಕಾಲಲ್ಲಿ ಮೆಟ್ಟಿಕೊಂಡು ಆಗಸದ ತನಕ ಬೆಳೆದು ನಿಂತಂತೆ ತಿಳಿಮೋಡಗಳೊಡನೆ ಚೆಲ್ಲಾಟವಾಡುತ್ತಿರುವನು !ಒಮ್ಮೆಗೇ ಇಡೀ ಮೂರ್ತಿಯನ್ನು ನೋಡಲು ನಮ್ಮ ಕಣ್ ಸೋಲುವುದು. ಒಂದೆರಡು ಚಣ ಕಣ್ಣನ್ನು ಅತ್ತ ಇತ್ತ ಆಡಿಸುತ್ತ ನಿಧಾನವಾಗಿ ಮೇಲುಮೇಲಕ್ಕೆ ಹತ್ತಿಸಬೇಕು. ಖಂಡಖಂಡವಾದ ದರ್ಶನ ಮಾತ್ರ ಲಭಿಸುವುದು. ಸಹಸ್ರದಳ ಕಮಲದಮೇಲೆ ಬಾಹುಬಲಿ ನಿಂತಿರುವನು. ಕಾಲಬುಡದಲ್ಲಿ ಸುತ್ತಲೂ ನಮಗಿನ್ನು ದಿಕ್ಕಿಲ್ಲವೆಂದು ಘಾತಿಕರ್ಮಗಳೆಲ್ಲ ಬೊಬ್ಬೆ ಹಾಕುವಂತೆ ಹುತ್ತಗಳೆದ್ದಿವೆ. ಸರ್ಪಗಳು ಬಿಲದ ಬಾಯಿಂದ ಇಣಿಕಿವೆ. ಮಂದಾರಲತೆ ಕಾಲುಸಂದಿಯಿಂದ ಹೊರಟು ಅತ್ತ ಇತ್ತ ಕುಡಿಯಿಟ್ಟು ಮೊಣಕಾಲ ಮೇಲಡರಿ ಎರಡು ತೊಡೆಯನ್ನು ತಾಕಿ ಕೈಗಳನ್ನೆಟಕಿಸಿಕೊಂಡು ತೋಳನ್ನು ಸುತ್ತುಹಾಕಿ ಅಲ್ಲಲ್ಲೆ ಹೂ ಗೊಂಚಲನ್ನು ಇಳಿಬಿಟ್ಟಿರುವುದು ! ನಮ್ಮ ದಿಟ್ಟಿಯೂ ಬಳ್ಳಿಯನ್ನಡರಿ ಮೇಲೇರ ಬೇಕಾಗುವುದು .ವಿಸ್ತಾರವಾದ ಎದೆ. ಭೂಗೋಲವನ್ನೂ ಕಿರುಗೋಲಿಯಂತೆ ಮೀಟ ಬಹುದಾದ ಬಾಹುಬಲ ! ಮುದ್ದಾದ ಗಲ್ಲ. ಚೆಂದುಟಿಗಳ ಮಾಟ ಮೂರ್ತಿಕಲೆಗೆ ಕಿರೀಟವಾಗುವಂತೆ ರಾರಾಜಿಸುವುದು !ಮಂದಹಾಸ ಅನಂತಸುಖದ ತೆರೆಯಾಗಿ ಚೆಂದುಟಿಗಳ ಮೇಲೆ ಲಾಸ್ಯವಾಡುತ್ತಿದೆ. ಮೂಗು ಕಣ್ಣು, ಹಣೆ, ಗುಂಗುರು ಕೂದಲು ಇವೆಲ್ಲ ಒಂದಕ್ಕಿಂತ ಇನೂಂದು ಮಿಗಿಲಾಗಿ ಕಲೆಯ ಕಿರಣ ರಾಜಿಯನ್ನು ಚೆಲ್ಲುತ್ತ ಕಂಗೊಳಿಸಿವೆ !

ಅತ್ತಮಬ್ಬೆ ಮೂರ್ತಿಯ ಭವ್ಯಾಕಾರವನ್ನು ಕಂಡು ಧನ್ಯಳಾದಳು. ಪಕ್ಕನೆ ಆಕೆಯ ನೆನಪಿನಲ್ಲಿ ನಾಗದೇವ ಹಾಗು ಗುಂಡುಮಬ್ಬೆಯರು ಸುಳಿಯಬೇಕೆ ?ಪ್ರಾಶಾಂತಸಾಗರ ದಲ್ಲಿ ಬಡಬಾನಲ ಭೋಂಕನ ಮೇಲೆದ್ದು ಬಂದಂತಾಯಿತು !

“ಮಹಾಸ್ವಾಮಿ, ನಿನ್ನನ್ನು ನೋಡುವವರೆಗಾದರೂ ನಮ್ಮವರನ್ನು ಬದುಕಿಸಬಾರದಾಗಿತ್ತೇ ! ನಿನ್ನಂತೆ ನಮ್ಮವರೂ ಸ್ವಾಭಿಮಾನಿಗಳು ! ನಿನ್ನಂತೆ ಅವರೂ ಸಾಹಸಪ್ರಿಯರು ! ಬದುಕಿದ್ದರೆ ನಿನ್ನಂತೆ

ಅವರೂ ಮಹರ್ಷಿಯಾಗುತ್ತಿದ್ದರೋ ಏನೋ !" ಎಂದು ಅತ್ತಿಮಬ್ಬೆ ಎಲ್ಲರಿಗೂ ಕೇಳುವಂತೆ ಬೊಬ್ಬೆ ಹಾಕಿ ಗೋಳೋ ಎಂದಳು.

"ಗುಂಡು ,ನಿನಗೂ ಪುಣ್ಯವಿಲ್ಲ ತಾಯಿ .ಅಥವ ನಿಮ್ಮಿಬ್ಬರನ್ನೂ ಕರೆಸಿಕೊಳ್ಳಲು ಗೊಮ್ಮಟಸ್ವಾಮಿಗೂ ಪುಣ್ಯವಿಲ್ಲವೊ ಏನೋ ! ಮಹಾಪ್ರಭು, ಅವರಿಬ್ಬರೂ ಇದ್ದಿದ್ದರೆ ಭರತಖಂಡದ ಮೂಲೆ ಮೂಲೆಯಲ್ಲೂ ನಿನ್ನನ್ನು ಕಡೆಸಿ ರಾಷ್ಟ್ರಕ್ಕೆ ರಕ್ಷಾಮಣಿಯಾಗಿ ಪ್ರತಿಷ್ಠಿಸುತ್ತಿದ್ದರು. ನಮ್ಮ ಗುಂಡು ಹೃದಯ ನಿನ್ನಂಥ ಹತ್ತು ಮೂರ್ತಿ ಗಳನ್ನು ಮಕ್ಕಳಂತೆ ಮಲಗಿಸಿಕೊಂಡು ! ಮಹಾಪ್ರಭು, ಅವರಿಬ್ಬರೂ ಹೋದುದು ನನ್ನ ಎರಡು ಕಣ್ಣೂ ಇಮರಿದಂತಾಯಿತಯ್ಯ !" ಎಂದು ಆಕಾಶ ಬಿರಿಯುವಂತೆ ಅತ್ತಿಮಬ್ಬೆ ಅರಿಚಿದಳು ! ಈ ವೇಳೆಗೆ ಸರಿಯಾಗಿ ಯಾರೋ ಬಬ್ಬಳು ಬಬ್ಬ ಮುದುಕಿಯನ್ನು ಕೈಹಿಡಿದು ಕರೆದುಕೊಂಡು ಬಂದು "ಅಜ್ಜಿ, ದೇವರ ಸಾನ್ನಿಧ್ಯಕ್ಕೆ ಬಂದಿರುವೆವು. ಪಾದದ ಬಳಿಕರೆದುಕೊಂಡು ಹೋಗಲೆ ?" ಎಂದು ಆಗಂತುಕಳು ಕೇಳಿದಳು.

"ಪಾದ ಗೀದ ನನಗೆ ಬೇಡ. ಪರಿಪೂರ್ಣವಾದ ದರ್ಶನವಾಗಬೇಕು. ನನ್ನಪ್ಪ ಕಣ್ಣುಕೊಡುವ ತನಕ ಅನ್ನನೀರು ಮುಟ್ಟುವುದಿಲ್ಲ !" ಎಂದು ಮುದುಕಿ ಅಬ್ಬರಿಸಿ ಅಲ್ಲೇ ಕುಳಿತುಕೊಳ್ಳುವಾಗ ಮೈಗೆ ಏನೋ ತಾಕಿದಂತಾಗಿ " ಏನಮ್ಮ ಇಲ್ಲಿರುವುದು. ಯಾರನ್ನಾದರೂ ತುಳಿದೆನೋ ಏನೋ !" ಎಂದು ಗೊಣಗಿದಳು.

"ನಾನಜ್ಜಿ ಅತ್ತಿಮಬ್ಬೆ" ಎಂದು ಆಕೆ ನುಡಿದಾಗ ಮುದುಕಿಗೆ ಮಿಂಚು ತಾಕಿದಂತಾಗಿ "ಮಹಾರಾಯಗಿತ್ತಿ ! ಅತ್ತಿಮಬ್ಬೆ !ವಿಜಯಪುರದಲ್ಲಿ ಇದೇ ಹೆಸರಿನ ಬಬ್ಬ ಮಾತಾಯಿ ಇದ್ದಾಳೆ. ನಿನ್ನದು ಯಾವುರೋ ?"

"ನಾನು ವಿಜಯಪುರಿಯ ಅತ್ತಿಮಬ್ಬೆಯೇ."

"ಅಯ್ಯೋ ನನ್ನ ತಾಯಿ ! ಒಳ್ಳೆ ವೇಳೆಗೆ ಸಿಕ್ಕಿರುವೆ ! ನೀನು ದಾನ ಚಿಂತಾಮಣಿ ದೀನದಲಿತರು ಏನು ಕೇಳಿದರೂ ಇಲ್ಲವೆನ್ನದೆ ಕರುಣಿಸಿರುವೆ. ಕನ್ನಡದ ಕಲ್ಪತರು ನೀನು. ಚಿಂತಾಕ್ರಾಂತರ ಚಿಂತಾಮಣಿ ನೀನು !ತಾಯಿ ಕೇಳಿದವರಿಗೆಲ್ಲ ಏನೇನೋ ಕೊಟ್ಟಂತೆ, ನನಗೂ ಕಣ್ಣು ಕೊಡಬಾರದೆ ?" ಎಂದು ಅಜ್ಜಿ ಶ್ರೀಮಂತರ ಮುಂದೆ ನಿಂತ ಭಿಕ್ಷುಕಿಯಂತೆ ಅಂಗಲಚಿದಳು.

"ಅಜ್ಜಮ್ಮ, ತಮ್ಮ ಸ್ಥಳ . . . . ."

"ಕೊಲ್ಹಾಪುರ. ಅಲ್ಲಿಂದ ಹೊರಡುವಾಗ ಕಣ್ಣಿದ್ದವು. ನಾನು ಬಡವೆ, ಕೈಯಲ್ಲಿ ಕಾಸಿಲ್ಲ. ಯಾರೋ ನಮ್ಮೂರಿಂದ ಹೊರಟರು .ನಾನೂ ಹಿಂಬಾಲಿಸಿದೆ. ಮಹಾರಾಯರು ದಾರಿಯದ್ದಕ್ಕೂ ಊಟ ಹಾಕಿದರು. ಕಣ್ಣಿರುವ ತನಕ ನಡೆದೆ. ಕಣ್ಣು ತುಸತುಸವಾಗಿ ಇಮರಿದವು. ಅಲ್ಲಿಂದ ಗಾಡಿಯನ್ನು ಹಿಡಿದುಕೊಂಡೇ ಹಿಂಬಾಲಿಸಿದೆ."

"ಹೊರಡುವಾಗ ಕಣ್ಣಿತ್ತೇ ?"

" ಇದ್ದವಮ್ಮ, ನಾವು ಹೊರಟ್ಟು ಮೂರು ತಿಂಗಳಾಯಿತು. ಒಂದು ವಾರದ ಹಿಂದೆ ಮನುಷ್ಯರು ಕಾಣುತ್ತಿದ್ದರು. ಮೂಗುಮುಖ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ .ಈಚೆಗೆ ಎಲ್ಲ ಒಂದೇ ಆಯಿತು. ಬಟ್ಟಬಯಲು, ಏನೂ ಕಾಣುವುದಿಲ್ಲ ! ನೀನು ಕೃಪಾನಿಧಿ. ಕಣ್ಣು ಮುಟ್ಟಿ ವಾಸಿಯಾಗು ಎಂದರೆ ವಾಸಿಯಾಗುವುದೋ ಏನೊ. ಆ ನನ್ನಪ್ಪನನ್ನು ಒಮ್ಮೆ ನೋಡಿಬಿಡುವೆನು. ಆಮೇಲೆ ಬೇಕಿದ್ದರೆ ಮತ್ತೆ ಇಮರಿ ಹೋಗಲಿ."

"ನನ್ನನ್ನು ಎಲ್ಲಾದರೂ ನೋಡಿದ್ದೆಯಾ ಅಜ್ಜಿ ."

" ನಮ್ಮ ನಾಡಿನಲ್ಲಿ ಮೂರು ಜನವನ್ನು ನೋಡದವರೇ ಪಾಪಿಗಳು" ಮೊದಲಯದಾಗಿ ತಮ್ಮನ್ನು. ಎರಡನೆಯದಾಗಿ ಕಾಳಾಲಾದೇವಿಯರನ್ನು, ಮೂರನೆಯದು ಬಾಹುಬಲಿಮೂರ್ತಿ.ಇಷ್ಟು ನೋಡಿದಮೇಲೆ ಇನ್ನೇನು ನೋಡದೆ ಇದ್ದರೂ ನಷ್ಟವೇನಿಲ್ಲ ಮೊದಲಿಬ್ಬರನ್ನೂ ನಾನು ಕೊಲ್ಹಾಪುರದಲ್ಲೇ ಕಂಡಿರುವೆನು. ಈ ನನ್ನ ಸ್ವಾಮಿಯನ್ನು ಕಾಣಬೇಕೆಂದು ಐನೂರು ಮೈಲಿ ನಡೆದೆ. ಕೊನೆಗೆ ನನ್ನ ಕಣ್ಣೇ ಹೋಗಬೇಕೆ ? ಕಣ್ಣುಕೊಟ್ಟರೆ ಸರಿ ಇಲ್ಲದಿದ್ದರೆ ಇಲ್ಲೇ ಸಾಯುವೆನು !"

"ಅಜ್ಜಮ್ಮ, ನಾನೂ ನಿಮ್ಮಂತೆ ಸಾಮಾನ್ಯ ಹೆಂಗಸು. ಕಣ್ಣು ಕೊಡುವ ಶಕ್ತಿ ನನಗಿದೆಯೆ ?ಹಿರಿಯರು ಬಿಟ್ಟು ಹೋದ ರಶಿ ಹೊನ್ನನ್ನು ಇರುವತನಕ ಕೊಟ್ಟೆ. ಕೆರೆಯಲ್ಲಿ ನೀರಿತ್ತು. ತೂಬು ಎತ್ತಿ ನೀರುಗಂಪಿ ಕೆಲಸಮಾಡಿದೆ. ನಾನೇನು ಬೆವರು ಸುರಿಸಿ ದುಡಿದಿರಲಿಲ್ಲವಲ್ಲ. ಜನತೆಯ ದುಡ್ಡನ್ನು ಜನತೆಗೆ ಅರ್ಪಿಸಿರುವೆನು. ಕೆರೆಯ ನೀರನ್ನು ಕೆರೆಗೆ ಚೆಲ್ಲಿರುವೆನು. ಇಷ್ಟಕ್ಕೆ ಜನ ನನ್ನನ್ನು ದಾನಂಚಿಂತಾಮಣಿಯೆನ್ನುವುದೆ ?"

“ಅಮ್ಮಯ್ಯ, ನನಗಾಗಿ ಸ್ವಾಮಿಯ ಪ್ರಾರ್ಥನೆ ಮಾಡಿ ಕಣ್ಣನ್ನು ಕರುಣಿಸಮ್ಮ ” ಎಂದು ಮುದುಕಿ ಹಸುಗೂಸಾಗಿ ಅತ್ತಳು. ಅತ್ತಿಮಬ್ಬೆಯ ಕಾಲನ್ನು ತಡವಿ ಗೋಳಾಡಿದಳು. ಅತ್ತಿಮಬ್ಬೆಯಲ್ಲಿ ವಿಶ್ವಾನುಕಂಪ ಉಕ್ಕಿಬಂದಿತು. ನೇರವಾಗಿ ಸ್ವಾಮಿಯ ಪಾದದ ಬಳಿ ಹೋಗಿ ಆರೆಚಣ ಕಣ್ ಮುಚ್ಚಿ ಲೋಕೋದ್ಧಾರಕ್ಕಾಗಿ ಪ್ರಾರ್ಥಿಸಿದಳು. ಗೊಮ್ಮಟ ಪಾದಕ್ಕೆ ಶುದ್ಧ ಜಲವನ್ನು ಸುರಿದಳು. ಸುರಿದಳು. ಸುರಿವಾಗ ಈಕೆಯ ಕಂಬನಿಯೂ ಅದರೊಡನೆ ಬೆರೆಯಿತು. ಅನಂತರ ಪಾದೋದಕವನ್ನು ತಂದು ಮುದುಕಿಯ ಕಣ್ಣ ಮೇಲೆ ಚಿಮುಕಿಸಿದಳು. “ಮಹಾಪ್ರಭು, ನಿನ್ನ ದರ್ಶನಕ್ಕೆ ಈ ಚೇತನ ಹಂಬಲಿಸುತ್ತಿದೆ ! ನನಗೆಒಂದು ಕಣ್ಣು ಸಾಕು. ಇನ್ನೊಂದರ ಬೆಳಕನ್ನು ಮುದುಕಿಗೆ ಕೊಟ್ಟುಬಿಡು. ಮುದುಕಿಗೆ ಕಣ್‌ಕೊಡದಿದ್ದರೆ ನಿನಗೆ ನಿನ್ನಾಣೆ !” ಎಂದು ಹಟರಯೋಗಿಯಂತೆ ಸಂಕಲ್ಪಮಾಡಿದಳು. ಪಾದೋದಕವನ್ನು ತಂದು ಮುದುಕಿಯ ಕಣ್ಣ ಮೇಲೆ ಚಿಮುಕಿಸಿದಳು. “ಮಹಾಪ್ರಭು ,ನಿನ್ನ ದರ್ಶನಕ್ಕೆ ಈ ಚೇನತ ಹಂಬಲಿಸುತ್ತಿದೆ ! ನನಗೆ ಒಂದು ಕಣ್ಣು ಸಾಕು. ಇನ್ನೊಂದರ ಬೆಳಕನ್ನು ಮುದುಕಿಗೆ ಕೊಟ್ಟುಬಿಡು. ಮುದುಕಿಗೆ ಕಣ್ ಕೊಡದಿದ್ದರೆ ನಿನಗೆ ನಿನ್ನಾಣೆ !” ಎಂದು ಹಟಯೋಗಿಯಂತೆ ಸಂಕಲ್ಪಮಾಡಿದಳು. ಪಾದೋದಕ ಕಣ್ಣಿಗೆ ಬಿದ್ದಾಗ ಮುದುಕಿಯ ಮೈಮೇಲೆ ಬೆಳದಿಂಗಳನ್ನು ತಂದು ಸುರಿದಂತಾಯಿತು ! ಸೂರ್ಯನಿಗೆ ಮುಸುಕಿದ್ದ ಮೈಮೇಲೆ ಬೆಳದಿಂಗಳನ್ನು ತಂದು ಸುರಿದಂತಾಯಿತು. ! ಸೂರ್ಯನಿಗೆ ಮುಸುಕಿದ್ದ ಕಾರ್ಮೋಡ ಸರಿವಂತೆ ಕಣ್ಣಿನ ಪೊರೆ ಹರಿಯಿತು. ಆಕೆಯಲ್ಲಿ ಕುತೂಹಲ ಹಾಗು ಉತ್ಸಾಹ ಏರಿದಂತೆ ಕಣ್ಣಿನ ಪೊರೆ ಹರಿಯಿತು. ಆಕೆಯಲ್ಲಿ ಕುತೂಹಲ ಹಾಗು ಉತ್ಸಾಹ ಏರಿದಂತೆ ಕಣ್ಣಿನ ನೋಟವೂ ಸ್ಪಷ್ಟವಾಯಿತು. ಈ ವೇಳೆಗೆ ಸರಿಯಾಗಿ ತಂಗಾಳಿ ಬೀಸಿತು. ಕಾರ್ಮೋಡ ಸೂರ್ಯನಿಗಡ್ಡವಾಗಿ ಬಿಸಿಲ ಜಳ ತಗ್ಗಿತು. ಮಿಂಚು ತೆಕ್ಕೆಹಾಕಿ ಕೊಂಡು ಕುಣಿದಾಡಿತು. ಬಿರುಮಳೆಯಾಗಿ ಬಾಹುಬಲಿಗೆ ಶುದ್ಧ ಜಲಾಭಿಷೇಕ ವಯಿತು! ಭಗವದನುಗ್ರಹ ಅಲೆಅಲೆಯಾಗಿ ಇಳಿವಂತೆ ಮಳೆನೀರು ವಿಶಾಲ ಕಾಯದ ಮೇಲೆ ಲಾಸ್ಯವಾಡಿ ಯತ್ರಿಕರನ್ನೆಲ್ಲ ಬೆರಗುಗೊಳಿಸಿತು ! ಮುದುಕಿಗೆ ಮತ್ತೆ ಕಣ್ ಬಂದವು ! ಬಾಹುಬಲಿಯ ಬೃಹದಾಕಾರವನ್ನು ಅಡಿಯಿಂದ ಷುುಡಿತನಕ, ಬೆಕ್ಕಸ ಬೆರವಾಗಿ ಆ ಮುದುಕಿ ತಾನೂ ಮಳೆಯಲ್ಲಿ

ನೆನೆಯುತ್ತ ಈಕ್ಷಿಸಿದಳು. ಅತ್ತಿಮಬೆಗೆ ಹೋದ ಪ್ರಾಣ ಮರಳಿದಷ್ಟು ಆನಂದವಾಯಿತು ! ಯಾತ್ರಿಕರು ಪವಾಡವನ್ನು ನೋಡಿ ಅಚ್ಚರಿಗೊಂಡರು !

ಅತ್ತಿಮಬ್ಬೆ ಹೋದ ಕಣ್ಣು ಬರಿಸಿದಳೆಂದು ಸುದ್ದಿ ಕಾಳ್ಗಿಚ್ಚಿನಂತೆ ವ್ಯಾಪಿಸಿತು ! ಮುಸ್ತಕಾಭಿಷೇಕಕ್ಕಾಗಿ ಭರತಖಂಡದ ಆತುದಿಯಿಂದ ಈ ತುದಿತನಕ ಇರುವ ಶ್ರಾವಕರಲ್ಲಿ ಬಹುಭಾಗ ಆಗಮಿಸಿದ್ದರು. ಮೂಕರು, ಕುರುಡರು, ಕಿವುಡರು, ಕುಂಟರು, ಹೆಳವರು, ಕುಷ್ಟರು, ತೊನ್ನರಾದಿಯಾಗಿ ಎಲ್ಲರೂ ಬಂದು ಅತ್ತಿಮಬ್ಬೆಯನ್ನು ಕಂಡು ತಂತಮ್ಮ ರೋಗನಿವಾರಣೆಮಾಡಬೇಕೆಂದು ಅಂಗಲಾಚಲು ಪ್ರಾರಂಭಿಸಿದರು. ಬಾಹುಬಲಿ ಮೂರ್ತಿಗಿಂತ ಅತ್ತಿಮಬ್ಬೆಯ ಕೀರ್ತಿಯೇ ಹೆಚ್ಚಾಯಿತು !ಅತ್ತಿಮಬ್ಬೆ ದೇಹ ಶ್ರಮವನ್ನೂ ಲೆಕ್ಕಿಸದೆ ಹಗಲುರಾತ್ರಿ ರೋಗಿಗಳಿಗಾಗಿ ಮುರುಗಿದಳು. ಅವರವರ ರೋಗ ವಾಸಿಯಾಗಲೆಂದು ಪಾರ್ಥಿಸಿದಳು. ಪುಣ್ಯವಿದ್ದವರೆಲ್ಲ ಈಕೆಯನ್ನು ಕಂಡರು. ಕಂಡವರಿಗೆಲ್ಲ ರೋಗ ವಾಸಿಯಾಯಿತು. ! ಅಜಿತಸೇನಾಚಾರ್ಯರು ಅತ್ತಿಮಬ್ಬೆಯನ್ನು ಕರೆಸಿಕೊಂಡು “ಅಮ್ಮ ,ಎಲ್ಲರ ರೋಗಗಳನ್ನೂ ವಾಸಿಮಾಡುತ್ತ ನೀನು ಇರುವ ಶಕ್ತಿಯನ್ನೆಲ್ಲ ಕಳೆದುಕೊಳ್ಳುತ್ತಿರುವೆ. ಒಂದೆರಡು ವರ್ಷದಲ್ಲಿ ನಿನ್ನ ಎಲ್ಲ ಶಕ್ತಿಯನ್ನೂ ಲೋಕ ಸೂರೆಮಾಡಿಬಿಡುವುದು ! ಮಣ್ಣುಗೆಯಲು ರತ್ನಖಚಿತವಾದ ಚಿನ್ನದ ಗುದ್ದಲಿಯನ್ನು ಉಪಯೋಗಿಸುವುದು ತರವೆ ?” ಎಂದು ಬುದ್ಧಿ ಹೇಳಿದರು.

ಲೋಕದ ಭರವರೋಗವನ್ನು ನಿವಾರಣೆಮಾಡಲುತೀರ್ಥಂಕರ ಭಗವಾನರು ವರ್ಷಾನುಗಟ್ಟಲೆ ಹೆಣಗಾಡಿದರಲ್ಲ ಸ್ವಾಮಿ ! ತೀಂರ್ಥಂಕರ ಮಹಾಪ್ರಭು ಅನಂತಶಕ್ತಿ ಇದ್ದವರು. ನಾನು ಕಡುಬಡವೆ, ನಿನ್ನಂದ ಲೋಕದ ರೋಗರುಜಿನಾದಿಗಳು ನಿರ್ಮೂಲ ವಾಗುವುದಾದರೆ ಆಗಲಿಬಿಡಿ ಸ್ವಾಮಿ” ಎಂದು ಅತ್ತಿಮಬ್ಬೆ ವಿಶ್ವನಿಕಂಪದಿಂದ ಪರಿತಪಿಸಿದಳು.

“ಅಮ್ಮಾಜಿ ,ಎಮ್ಮೆಗೆ ನೀರು ಕಾಸಲು ಮನೆಕಿತ್ತು ತೊಲೆದೂಲ ಇವನ್ನು ಉಪ ಯೋಗಿಸುವುದು ಸರಿಯೆ ? ದೈವ ಭಕ್ತರಿಗೆಲ್ಲ ಅಪೂರ್ವಸಿದ್ಧಿ ಇದ್ದೇಇರುತ್ತದೆ. ಆದರೆ ವಿಶೇಷ ಸಂದರ್ಭ ಬಂದ ಹೊರೆತು ಅವರು ತಮ್ಮ ಸಿದ್ಧಿಯನ್ನು ಉಪಯೋಗಿಸುವುದಿಲ್ಲ. ಹೊಲಕ್ಕೆ ನೀರು ಹಾಯಿಸಲು ಜನ ಕೆರೆಯನ್ನೇ ಒಡೆದು ಹಾಕುತ್ತಿರುವರಲ್ಲ !” ಎಂದು ಆಚಾರ್ಯರು ಮರುಕತೋರಿದರು.

“ಮುಂದೆ ನಾನು ಏನುಮಾಡಬೇಕೋ ತಿಳಿಸಿಸ್ವಾಮಿ.”

‘ತಾಯಿ ,ಬೇಕಾದರೆ ಜನಕ್ಕೆ ಧೈಯಹೇಳಿ. ದೇವರಲ್ಲಿ ಭಕ್ತಿಯಿಟ್ಟು ಅವರವರೇ ಪ್ರಾರ್ಥಿಸಲಿ. ನಾಡಿನ ಜನತೆಯನ್ನೆಲ್ಲ ಕಾಯಕವನ್ನು ತೊರೆಸಿ ಚತ್ರಕ್ಕೆ ಕರೆಸಿಕೊಂಡು ವರ್ಷನುಗಟ್ಟಲೆ ಊಟ ಹಾಕುವುದೂ ಒಂದೇ ಈಗ ನೀವು ಮಾಡುತ್ತಿರುವ ದೇಶ ಸೇವೆಯೂ ಒಂದೇ ! ಇತ್ತ ಜನ ಸೋಮಾರಿಗಳಾಗುವರು, ಅತ್ತ ನೀವು ದಿವಾಳಿ ಯಾಗುವಿರಿ ! ಇನ್ನಾದರೂ ಎಚ್ಚರಗೊಳ್ಳಿ. ಪವಾಡವನ್ನು ಪ್ರರ್ದರ್ಶನಮಾಡಲು ಹೋಗಬೇಡಿ ನಿಮ್ಮ ಆತ್ಮಕಲ್ಯಾಣ ಮೊದಲು ಅನಂತರ ಲ್ಫ್ಕದ ಕಲ್ಯಾಣ ! ತೀರ್ಥಂಕರರು ಯಾರ ರೋಗವನ್ನೂ ತಾವಾಗೇ ವಾಸಿಮಾಡುವುದಿಲ್ಲ ; ವೃದ್ಯರಂತೆ ಔಷಧಿ ಕೊಟ್ಟು ಪಥ್ಯ ಸೂಚಿಸಿ ಮಾರ್ಗದರ್ಶನ ಮಾಡುವರು. ಅದರಂತ್ವೆ ಆಚರಿಸಿದವರೆಲ್ಲ ಉದ್ಧಾರ ವಾಗುವರು ! ಅನಂತಶಕ್ತನಾದ ಆ ಮಹಾತ್ಮನೇ ಇಷ್ಟೊಂದು ಎಚ್ಚರವಹಿಸುವಾಗ ನೀನು ಅಷ್ಟೋ ಇಷ್ಟೋ ಶಕ್ತಿಯಿರುವಾಯಿಕೆ ಲೋಕದ ಸಾಲವನ್ನೆಲ್ಲ ತಲೆಯಮೇಲೆ ಹಾಕಿ ಕೊಂಡು ಒದ್ದಾಡುವುದು ತರವೆ ? ಅವರವರ ರೋಗಕ್ಕೆ ಅವರವರೇ ಪ್ರಾರ್ಥಿಸಲಿ. ಆಗಲೂ ರೋಗ ವಾಸಿಯಾಗುವುದು. ಬೇಕಿದ್ದರೆ ಜನತೆಯಲ್ಲಿ ತಾವು ದೈವಭಕ್ತಿಯನ್ನು ಹೆಚ್ಚಿಸಿ. ಚ್ರ್ತಿಯೊಂದು ಜೀವಿಯಲ್ಲೂ ಅನಂತಶಕ್ತಿ ಗುಪ್ತಘಾಮಿನಿಯಾಗಿದೆ. ಅದರ ನೆನಪು ಮಡಿಕೊಡಿ” ಎಂದು ಆಚಾರ್ಯರು ತಿಳಿಹೇಳಿದರು.

ಉನ್ನತಕುಕ್ಕುಟ್ಟೇಶ್ವರ ಜಿನೇಶ್ವರನಂ ಜಿನಭಕ್ತೆ ಪೋಗಿ ಕಾಣ್ಬನ್ನೆಗ
ಮನ್ನಮಂ ತೊರೆದು ಪರ್ವತಮಂ ಮುದದೇರೆ ತಜ್ಜಿನಾ
ಸನ್ನದೊಳತ್ತಿಯಬ್ಬೆಗೆ ಪಥಶ್ರಮಮಾದೊಡಕಾಳವೃಷ್ಟಿಯಾ
ಯ್ತಿನ್ನವು ದೇವಭಕ್ತಿಗದು ಚೋದ್ಯಮೆ ಕೊಳ್ಳವೆ ಕೊಳ್ಳವೆ ಪುಷ್ಪವೃಷ್ಟಿಗಳ್

ಜಿನಪದಪಂಕಜಭ್ರಮರನೆಂಬ ನೆಗರ್ತೆಯಾನಾಳ್ದ ಮಲ್ಲಪ
ಯ್ಯನ ನೆಗಳ್ದಪ್ಪಕಬ್ಬೆಯ ಮಗಳ್ ಸಚಿವೋತ್ತಮನಪ್ಪ ದಲ್ಲಪ
ಯ್ಯನ ಸೊಸೆ ನಾಗದೇವನ ಮಗಳ್ ಸಚಿವೋತ್ತಮನಪ್ಪ ದಲ್ಲಪ

ಜನ್ನಮೆನಿಪತ್ತಿಮಬ್ಬೆ ಜಿನಶಾಸನಮಂ ಬೆಳಗುತ್ತು ಮಿರ್ದಪಳ್

ಎಣೆ ಮರುದೇವಿ ಪಾಸಟಿ ಸುಷೇಣೆ ಸಮಂ ಶಿವದೇವಿ ಪಾಟಿ ಲ
ಕ್ಷ್ಮಣೆ ಸದೃಶಂ ಮಹಾವಿಜಯಸೇನೆ ಸಮಾನೆ ಸುಶೀಳೆ ಪೋಲ್ಕೆ ರು
ಕ್ಮಿ ಣಿ ಸರಿ ಸತ್ಯಭಾವೆ ತೊಣೆ ಮಿಕ್ಕ ಸುಳೋಚನೆ ತತ್ಸ್ವರೂಪೆ ರೋ
ಹಿಣಿ ದೊರೆ ಸಂದರುಂಧತಿ ಪೆರರ್ ದೊರೆಯೇ ಗುಣದಂಕಕಾರ್ತಿಯೊಳ್